**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 15-06-2018.**

ಪಾಟೀ ಸವಾಲು ಶ್ರೀ ಡಿ.ಕೆ.ಎಂ. ವಕೀಲರಿಂದ ಃ

ವಾದಿ ನನಗೆ ಪರಿಚಯ ಇಲ್ಲ. ವಾದಿಯ ಬಳಿ ನಾನು ಯಾವುದೆ ಹಣ ವ್ಯವಹಾರ ಮಾಡಿಲ್ಲ. ವಾದಿಯ ಗಂಡ ದೇವರಾಜು ಗ್ರಂಥಲಾಯದಲ್ಲಿ ಕೆಲಸ ಮಾಡುತ್ತಾರೆ. ನನ್ನ ಹೆಂಡತಿಯೂ ಸಹ ಗ್ರಂಥಲಾಯದಲ್ಲಿ ಕೆಲಸ ಮಾಡುತ್ತಾರೆ. ದೇವರಾಜು ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಸದರಿ ದೇವರಾಜು ರವರಿಂದ 1 ಲಕ್ಷದ 30 ಸಾವಿರ ರೂಪಾಯಿಗಳು ಸಾಲ ಪಡೆದಿದ್ದೆ. ಆಗ ದೇವರಾಜು ಒಂದು ಖಾಲಿ ಛಾಪಾ ಕಾಗದವನ್ನು ಕೊಡುವಂತೆ ಕೇಳಿದನು. ಸದರಿ ಛಾಪಾ ಕಾಗದವನ್ನು ನಾನೇ ತಂದು ಕೊಟ್ಟಿರುತ್ತೇನೆ. 1 ಲಕ್ಷದ 30 ಸಾವಿರ ರೂಪಯಿಗಳನು ದಿನಾಂಕಃ04.12.2013 ರಂದು ಪಡೆದುಕೊಂಡಿರುತ್ತೇನೆ. ಆಗ ದೇವರಾಜು ಹಾಗೂ ಆತನ ಹೆಂಡತಿ ವಾದಿ ಇದ್ದರು. ಹಣವನ್ನು ಪಡೆಯವಾಗ ನಾನು ಮತ್ತು ನನ್ನ ಹೆಂಡತಿ ಪಡೆದುಕೊಂಡಿರುತ್ತೇವೆ. ಯಾವುದೇ ಬಡ್ಡಿ ಮಾತುಕತೆಯಾಗಿರಲಿಲ್ಲ. ಆಗ ಛಾಪಾ ಕಾಗದವನ್ನು ನನ್ನ ಹಾಗೂ ವಾದಿಯ ಹೆಸರಿಗೆ ತಂದಿರುತ್ತೇನೆ.

ನಾನು ಬೇರೆ ಯಾರ ಬಳಿ ಸಾಲ ಮಾಡಿಲ್ಲ. ವಾದಿ ಹಾಗೂ ಆಕೆಯ ಗಂಡ ದೇವರಾಜು ರವರಿಗೆ ದಿನಾಂಕಃ15.12.2013 ರಂದು 1 ಲಕ್ಷದ 12 ಸಾವಿರ ರೂಪಾಯಿಗಳನ್ನು ವಾಪಸ್ಸು ಮಾಡಿರುತ್ತೇನೆ. ಸದರಿ ಹಣವನ್ನು ನಾಗೇಶ ಎಂಬುವವರಿಂದ 50 ಸಾವಿರ ಸಾಲ ಪಡೆದು ಹಾಗೂ ಭತ್ತ ಮಾರಾಟ ಮಾಡಿ 10 ಸಾವಿರ ಹಾಗೂ ಕೊಬ್ಬರಿ ಮಾರಾಟ ಮಾಡಿ 40 ಸಾವಿರ ರೂಪಾಯಿ ಹಾಗೂ ತೆಂಗಿನ ಕಾಯಿ ಮಾರಾಟ ಮಾಡಿ 12 ಸಾವಿರ ರೂಪಾಯಿಗಳನ್ನು ವಾದಿಗೆ ನೀಡಿರುತ್ತೇನೆ. ಹಣ ನೀಡಿದಾಗ ವಾದಿಯಿಂದ ನಾನು ಡೈರಿಗೆ ಬರೆಸಿಕೊಂಡಿದ್ದು ವಾದಿ ತನ್ನ ಸಹಿ ಹಾಕಿರುತ್ತಾರೆ.

ನಾನು ದಿನಾಂಕಃ16.03.2015 ರಂದು ಚನ್ನರಾಯಪಟ್ಟಣ ಟೌನ್, ಶಿವನಂಜಪ್ಪ ರವರ ಮಗ ರಾಮೇಗೌಡ ರವರಿಂದ 3 ಲಕ್ಷ ರೂಪಾಯಿ ಪಡೆದು ಆದಾರ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸಾಲವನ್ನು ನನ್ನ ತಾಯಿ ಪಡೆದಿದ್ದು, ಅದರ ತೀರಿಸುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ22.02.2015 ರಂದು ವಾದಿ ಮತ್ತು ಆಕೆಯ ಗಂಡನಿಗೆ 16 ಸಾವಿರದ 630 ರೂಪಾಯಿಗಳನ್ನು ಬಡ್ಡಿಗೆಂದು ನೀಡಿರುತ್ತೇನೆ. ನಂತರ 1370 ರೂಪಾಯಿ ಉಳಿಕೆ ಉಳಿದಿದ್ದು, ಸದರಿ ಹಣವನು ನನ್ನಿಂದ ನೀಡಲು ನೀಡದಿರುವ ಕಾರಣ ನೀಡಿಲ್ಲ.

ನಾನು ಛಾಪಾ ಕಾಗದಕ್ಕೆ ಎರಡು ಕಡೆ ಸಹಿ ಮಾಡಿದ್ದೇನೆ. ಸದರಿ ಛಾಪಾ ಕಾಗದವನ್ನು ಉಳಿಕೆ ಹಣವನ್ನು ನೀಡಿದ ನಂತರ ಕೊಡುವುದಾಗಿ ತಿಳಿಸಿದರು. ಮೇಲ್ಕಂಡ ಎರಡು ಬಾರಿ ಹಣ ನೀಡಲು ಛಾಪಾ ಕಾಗದವನ್ನು ನೀಡುವಂತೆ ಕೇಳಿರುತ್ತೇನೆ. ಆದರೆ ನೀಡಿಲ್ಲ. ಹಣ ನೀಡಲು ಹೋದಾಗ ಮತ್ತು ನನ್ನ ಹೆಂಡತಿ ಇದ್ದೆವು. ದಾವೆಯನ್ನು ಸಲ್ಲಿಸಿದ ನಂತರ ನಾನು ಕೇಳಿಲ್ಲ. ವಾದಿ ಗಲಾಟೆ ಮಾಡುತ್ತಿದ್ದರಿಂದ ನಾನು ಕೇಳಿಲ್ಲ. ಸದರಿ ಛಾಪಾ ಕಾಗದವನ್ನು ವಾಪಸ್ಸು ನೀಡುವಂತೆ ಯಾವುದೇ ನೋಟೀಸು ನೀಡಿಲ್ಲ. ಪೋಲಿಸರಿಗೆ ಯಾವುದೆ ದೂರು ನೀಡಿಲ್ಲ.

ನಾನು ಮನೆಗೆ ಸುಮಾರು 13 ಲಕ್ಷ ಖರ್ಚು ಮಾಡಿದ್ದೇನೆ. ಸದರಿ ಮನೆಯು ಸಂಪೂರ್ಣಗೊಂಡಿದೆ. ಸದರಿ ಮನೆಯನ್ನು ಕಟ್ಟಲು 2012 ರಲ್ಲಿ ಪ್ರಾರಂಭ ಮಾಡಿರುತ್ತೇನೆ. ವಾದಿಯ ಗಂಡನಿಂದ ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡಿದ್ದೇನೆ. ಮನೆ ಕಟ್ಟಲು ನಾನು ಯಾರಿಂದಲೂ ಸಾಲ ಮಾಡಿಲ್ಲ. ದಾವಾ ಸಲ್ಲಿಸುವ ಮೊದಲು ವಾದಿಯಿಂದ ನನಗೆ ನೋಟೀಸು ಬಂದಿತ್ತು ಎಂದರೆ ಸರಿ. ಸದರಿ ನೋಟಿಸಿನಲ್ಲಿ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ನಂತರ ನಮ್ಮ ವಕೀಲರ ಮೂಲಕ ನಾನು ನೀಡಿರುವ ದಾಖಲಾತಿಗಳ ಜೆರಾಕ್ಸ್ ನ್ನು ನೀಡುವಂತೆ ನೋಟಿಸು ಕಳುಹಿಸಿದ್ದು, ವಾದಿಯ ವಕೀಲರು ಸದರಿ ದಾಖೆಗಳನ್ನು ಜೆರಾಕ್ಸ್ ದಾಖಲೆಗಳನ್ನು ಕಳುಹಿಸಿರುವುದಿಲ್ಲ.

ನಾನು ಲಿಖಿತ ಹೇಳಿಕೆ ಸಲ್ಲಿಸಿದ್ದು, ಸದರಿ ಲಿಖಿತ ಹೇಳಿಕೆಯಲ್ಲಿನ ಎಲ್ಲಾ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ನಾನು ಸಾಲ ಪಡೆದು ವಾಪಸ್ಸು ನೀಡಿರುವ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿ.

ನಿಶಾನೆ ಡಿ-1 ರಲ್ಲಿ ಬರೆದಿರುವ ಬರವಣಿಗೆ ನನ್ನದು. ಸದರಿ ಬರವಣಿಗೆಯನ್ನು ದೇವರಾಜು ರವರು ತಮ್ಮ ಮನೆಯಲ್ಲಿ ಬರೆಯಲು ಹೇಳಿದರು. ಆ ಸಮಯಕ್ಕೆ ನಾನು ಮತ್ತು ನನ್ನ ಹೆಂಡತಿ ಹಾಗೂ ವಾದಿ ಇದ್ದೆವು. ನಿಶಾನೆ ಡಿ-2 ನನ್ನ ಬಳಿ ಇತ್ತು. ನಿಶಾನೆ ಡಿ-2 ರ ರಶೀದಿ ಅದಾರ ಪತ್ರಕ್ಕೆ ಛಾಪಾ ಕಾಗದ ತಂದಿರುವ ರಶೀದಿ ಎಂದರೆ ಸರಿ. ನಿಶಾನೆ ಡಿ-2 ರ ಬರವಣಗೆಯನ್ನು ದೇವರಾಜು ರವರ ತಿಳಿಸಿದ ಮೇರೆಗೆ ಅವರ ಮನೆಯಲ್ಲಿ ಬರೆದಿರುತ್ತೇನೆ. ನಿಶಾನೆ ಡಿ-1 ರಲ್ಲಿನ ದಿನಾಂಕವನ್ನು 15.12.2015 ಎಂದು ವಾದಿ ನಮೂದಿಸಿರುತ್ತಾರೆ. ನಿಶಾನೆ ಡಿ-2 ರಲ್ಲಿ 15.03.2014 ಎಂದು ಬರೆದಿರುವುದನ್ನು 15 ಎಂದು ತಿದ್ದಿದೆ ಎಂದರೆ ಸರಿ. 1370 ಬಾಲೆನ್ಸ್ ಎಂದು ಬರೆದಿರುವ ಅಕ್ಷರ ನಾನೇ ಬರೆದಿದ್ದೇನೆ.

ಮನೆ ಕಟ್ಟುವ ಸಲುವಾಗಿ ವಾದಿಯಿಂದ 1 ಲಕ್ಷದ 30 ಸಾವಿರ ರೂಪಾಯಿ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಿಶಾನೆ ಪಿ-1 ರಲ್ಲಿರುವ ಸಹಿ ನನ್ನದೆ. ಜವರೇಗೌಡ ರವರ ಮಗ ಶಿವಲಿಂಗೇಗೌಡ ಗೊತ್ತಿಲ್ಲ. ನಂಜೇಗೌಡ ರವರ ಮಗ ಪುಟ್ಟೇಗೌಡ ಗೊತ್ತಿಲ್ಲ. ನಾನು ಮೊದಲು 1 ವರೆ ಲಕ್ಷ ಸಾಲಬೇಕೆಂದು ಕೇಳಿದ್ದೆ ಎಂದರೆ ಸರಿ. ಸದರಿ ಹಣವನ್ನು ನವಂಬರ್ ತಿಂಗಳ ಕೊನೆಯ ವಾರದ 2013 ರಲ್ಲಿ ಕೇಳಿದ್ದೆ ಎಂದರೆ ಸರಿ. ಆಗ ವಾದಿಯ ಗಂಡ ದೇವರಾಜು ಛಾಪಾ ಕಾಗದ ತೆಗೆದುಕೊಂಡು ದಿನಾಂಕಃ04.12.2013 ರಂದು ಬರಲು ತಿಳಿಸಿದರು. ಅದೇ ದಿನ ನಾನು ಛಾಪಾ ಕಾಗದ ತೆಗೆದುಕೊಂಡು ಹೋಗಿರುತ್ತೇನೆ. ಆ ದಿನ 1 ಲಕ್ಷದ 30 ಸಾವಿರ ರೂಪಾಯಿಗಳನ್ನು ವಾದಿ ಮತ್ತು ಆಕೆಯ ಗಂಡ ನೀಡಿದರು. ಆ ದಿನ ವಾದಿಯ ಗಂಡ ತಮಗೆ ಸಂಬಳ ಆಗದಿರುವ ಕಾರಣ 50 ಸಾವಿರ ರೂಪಾಯಿ ನೀಡಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಸದರಿ ಸಾಲದ ಹಣ 1 ಲಕ್ಷ 30 ಸಾವಿರ ರೂಪಾಯಿ ವಾದಿಗೆ ಸೇರಿದ್ದು ಎಂದರೆ ಸಾಕ್ಷಿಯು ಆಕೆಯ ಗಂಡನಿಗೆ ಸೇರಿದ್ದು ಎಂದು ನುಡಿಯುತ್ತಾರೆ.

ದಿನಾಂಕಃ04.12.2013 ರಂದು 50 ಸಾವಿರ ರೂಪಾಯಿ ಉಳಿಕೆ ಹಣ 80 ಸಾವಿರ ರೂಪಾಯಿ ದಿನಾಂಕಃ02.01.2014 ರಂದು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ಮತ್ತು ಸಾಕ್ಷಿದಾರರ 80 ಸಾವಿರ ರೂಪಾಯಿಗಳನ್ನು ನಿಶಾನೆ ಪಿ-1 ನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-1 ರ ಎಲ್ಲಾ ವಿಚಾರಗಳನ್ನು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸೂಚನೆಯಂತೆ ನಿಶಾನೆ ಪಿ-1 ನ್ನು ಬಿಕ್ಲಂದಾರರು ಬರೆದಿದ್ದಾರೆ ಎಂದರೆ ಸರಿಯುಲ್ಲ. ನಿಶಾನೆ ಪಿ-1 ಕ್ಕೆ

ಸಾಕ್ಷಿದಾರರ ಸಮಕ್ಷಮ ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಸಮಯಕ್ಕೆ ತಕ್ಕಂತೆ ನನ್ನ ಹೇಳಿಕೆ ಬದಲಾಯಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ಲಕ್ಷ 30 ಸಾವಿರ ರೂಪಾಯಿಗೆ ನಾನು ಯಾವುದೇ ಬಡ್ಡಿ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಸಹಿಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆ ಇಲ್ಲ.*

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ